ನೀನು ಉಳಿದಿರಬೇಕು ಎಂದು ನಾನು ನಿದ್ರಿಸುತ್ತೇನೆ
ಅಷ್ಟು ಸರಳ, ಮತ್ತೇನಿಲ್ಲ.
ಕನಸುಗಳು ತಮ್ಮಲ್ಲಿ ತಾವು ಏನೂ ಅಲ್ಲ
ನೀನು ಅದುಮಿಟ್ಟಿರುವ ಕಾಯಿಲೆ
ಅಲ್ಲದೇ ಮತ್ತೇನಿಲ್ಲ.

**ಮೂರನೇ ಕವಯಿತ್ರಿ**

ಈ ವರ್ಷ ನೊಬೆಲ್ ಪುರಸ್ಕಾರ ಪಡೆದ ಮೂವರು ಮಹಿಳೆಯರಲ್ಲಿ ಒಬ್ಬರು ಲೂಯಿಸ್ ಗ್ಲುಕ್. ಸಾಹಿತ್ಯದ ನೊಬೆಲ್ ಪಡೆದ ಕವಯಿತ್ರಿಯರಲ್ಲಿ ಮೂರನೆಯವರು ಗ್ಲುಕ್ (ಈ ಮುನ್ನ ಪಡೆದ ಕವಯಿತ್ರಿಯರೆಂದರೆ ಗೆಬ್ರಿಯೆಲಾ ಮಿಸ್ತ್ರಲ್; ವಿಸ್ಲಾವಾ ಜಿಂಬೊರ್ಸ್ಕಾ). 117 ವರ್ಷಗಳ ನೊಬೆಲ್ ಪ್ರಶಸ್ತಿಯ ಇತಿಹಾಸದಲ್ಲಿ 28 ಬಾರಿ ಕಾವ್ಯಕ್ಕೆ ಸಮ್ಮಾನ ದೊರಕಿದೆ. ಗ್ಲುಕ್ ಸಾಹಿತ್ಯಕ್ಕಾಗಿ ನೊಬೆಲ್ ಪಡೆದ 16ನೇ ಮಹಿಳೆ.

ಜನಪ್ರಿಯತೆಯನ್ನು ಸಂದೇಹದಿಂದ ನೋಡುವ ಗ್ಲುಕ್, ತಮ್ಮ ಕಾವ್ಯದಲ್ಲಿ ಅನುಭವದ, ಆಶಯದ, ಜೀವನದ ಸಂಕೀರ್ಣತೆಗಳಿಗೆ ಸಂವಾದಿಯಾದ ಕಲಾತ್ಮಕತೆಯನ್ನು ಸಾಧಿಸಲು ಪ್ರಯತ್ನಿಸುತ್ತಾರೆ. 'ಕಾವ್ಯ ಉಳಿದಿರಲು ಕಾರಣ ಅದರ ಕಾಡುವ ಗುಣ. ಹಾಗೆ ಅದು ಕಾಡಲು ಬೇಕಾದದ್ದೆಂದರೆ ಸಂಪೂರ್ಣ ಸ್ಪಷ್ಟತೆ ಮತ್ತು ಅಪಾರ ನಿಗೂಢತೆ. ಕಾವ್ಯದ ಜಾಯಮಾನವೇ ಹಾಗೆ: ಪೂರ್ತಿ ಕೈಗೆಟುಕುವುದೂ ಇಲ್ಲ, ಪೂರ್ತಿ ಅರಿತು ಕೊಳ್ಳುವುದೂ ಸಾಧ್ಯವಿಲ್ಲ' ಎನ್ನುವ ಗ್ಲುಕ್ ಉಬ್ಬರ–ಅಬ್ಬರವಿಲ್ಲದ, ನೇರನುಡಿಗಳ, ನಿಖರ ಪ್ರತಿಮೆಗಳ, ತುಣುಕು ಕಥನಗಳ, ಪೌರಾಣಿಕ ಸಂಕೇತಗಳ ಕಾವ್ಯ ಬರೆಯುತ್ತಾರೆ. ಯಥಾರ್ಥ ಜೀವನದ ಗದ್ದಲ ನಮ್ಮನ್ನು ಸುತ್ತಲೂ ಮುತ್ತಿರುವಾಗ ಅದಕ್ಕೆ ಪ್ರತಿರೋಧವಾಗಿ ಕಲಾವಿದನ ದನಿ ಇರಬೇಕಾಗುತ್ತದೆ. 'ಕವಿಯಾದವಳು ಶಬ್ದಗಳನ್ನು ಸತ್ಯದ ಜೊತೆಗಿನ ಹೊಸಹೊಸ ಹೊಂದಾಣಿಕೆಗೆ ಅಣಿಗೊಳಿಸುತ್ತ, ಭಾಷೆಯ ಜೊತೆಗೆ ಸರಸವಾಡುತ್ತ, ಭಿನ್ನ ನೋಟ, ಮಹತ್ವ, ಆಶಯದ ಆವಿಷ್ಕಾರ ಮಾಡುತ್ತಾಳೆ' ಎಂದು ನಂಬಿರುವ ಗ್ಲುಕ್ ಅವರ ಪ್ರಕಾರ ಕವಿಯ ಧ್ವನಿ ಯಾವಾಗಲೂ ಅಂತರಾಳದ ರಹಸ್ಯವನ್ನು ಹಂಚಿಕೊಳ್ಳುವ ಸಂಭಾಷಣೆ.

ನನ್ನ ಯಾತನೆಯ ಕೊನೆಯಲ್ಲಿ
ಇತ್ತು ಒಂದು ಬಾಗಿಲು.
ಕೇಳಿಸಿಕೋ ನನ್ನ: ನೀನು ಸಾವೆಂದು ಕರೆಯುವುದನ್ನು
ನಾನು ಬಲ್ಲೆ.
ನೆತ್ತಿಯ ಮೇಲೆ, ಗದ್ದಲ, ಪೈನು ಮರಗಳ ರೆಂಬೆಗಳ ಚಲನೆ.
ತರುವಾಯ ಏನಿಲ್ಲ. ಒಣ ನೆಲದ ಮೇಲೆ
ಮಂಕಾಗಿ ಮಿಣುಕುವ ಸೂರ್ಯ.
ಕಪ್ಪು ಮಣ್ಣಿನಲ್ಲಿ
ಪ್ರಜ್ಞೆಯಾಗಿ ಹೂತಿರುವುದು
ಅತ್ಯಂತ ಭೀಕರ ಸಂಗತಿ. ('ದ ವೈಲ್ಡ್ ಐರಿಸ್')